ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ ಕಛೇರಿ, ವಾಣಿಜ್ಯ ತೆರಿಗೆ ಸಂಕೀರ್ಣ, 80-ಅಡಿ ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ತುಮಕೂರು-572103 ಕಛೇರಿ ದೂರವಾಣಿ: 0816-2291489 E-mail: acctenf.tum@ka.gov.in

ಸಂಖ್ಯೆ:ವಾತೆಸಆ/ಜಾರಿ/ತು/ಜಿಸಿಆರ್-67-ಎ/2020-21 ದಿನಾಂಕ 23-03-2021.

---

## :: ಅಡಿಕೆ ಮತ್ತು ಸರಕು ವಾಹನ ಹರಾಜು ಪ್ರಕಟಣೆ ::

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರು ದಿನಾಂಕ 08-09-2020 ರಂದು 25120 ಕೆ.ಜಿ. ಅಡಿಕೆಯನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ,2017ರ ಕಲಂ 130ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸದರಿ ಸರಕನ್ನು ಮತ್ತು ಸರಕು ವಾಹನವನ್ನು ''ಹೇಗೆ ಇದೆಯೋ ಹಾಗೆಯೇ'' ಇರುವ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದ್ದು, ಈ ಸಂಬಂಧ ಆಸಕ್ತಿಯುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ಡು ಲಕೋಟೆಯನ್ನು ಸಲ್ಲಿಸಲು ದಿನಾಂಕ 23-03-2021 ರವರೆಗೆ ಸಂಜೆ 5.00 ಗಂಟೆಯವರೆಗೆ ಅವಧಿಯನ್ನು ನಿಗಧಿಪಡಿಸಲಾಗಿತ್ತು, ಹಾಗೂ ಸೀಲ್ ಮಾಡಿದ ಬಿಡ್ ಕವರ್‌ಗಳನ್ನು ತೆರೆಯಲು ದಿನಾಂಕ 24-03-2021ರ ಅವಧಿಯನ್ನು ನಿಗಧಿಪಡಿಸಲಾಗಿತ್ತು. ಪ್ರಸ್ತುತ, ಬಿಡ್‌ದಾರರಿಗೆ ಸೀಲ್ ಮಾಡಿದ ಬಿಡ್ ಕವರ್‌ಗಳನ್ನು ಸಲ್ಲಿಸಲು ದಿನಾಂಕ 30-03-2021ರಂದು ಸಂಜೆ 5.00 ಗಂಟೆಯವರೆಗೆ ಅವಧಿಯನ್ನು ವಿಸ್ತರಿಸಿ ದಿನಾಂಕ 23-03-2021 ರಂದು ಆದೇಶ ಹೊರಡಿಸಲಾಗಿದೆ ಹಾಗೂ ಸೀಲ್ ಮಾಡಿದ ಬಿಡ್ ಕವರ್‌ಗಳನ್ನು ದಿನಾಂಕ 31-03-2021 ರಂದು 11.00 ಗಂಟೆಯ ನಂತರ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ರವರ ಕಛೇರಿಯಲ್ಲಿ ತೆರೆಯಲಾಗುವುದು. ಆಸಕ್ತಿಯುಳ್ಳ ಖರೀದಿದಾರರು / ಬಿಡ್‌ದಾರರು ಮುಚ್ಚಿದ ಲಕೋಟೆಯಲ್ಲಿ ಬಿಡ್‌ನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ನಿಯಮಗಳು ಮತ್ತು ಷರತ್ತುಗಳು ದಿನಾಂಕ 17-03-2021ರ ಪ್ರಕಟಣೆಯಲ್ಲಿರುವಂತೆ ಮುಂದುವರೆಯುತ್ತವೆ. ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣ http://ctax.kar.nic.in/publicauction .asp ರಲ್ಲಿ ಪ್ರಕಟಿಸಲಾಗಿದೆ.

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು
(ಜಾರಿ) ತುಮಕೂರು.

Assistant Commissioner of Comml.Taxes,
(Enforcement) Tumkur.